Mr. SPEAKER.—That is a matter of opinion.

ಶ್ರೀ ಎ. ಆರ್. ಬದರಿನಾರಾಯಣ.—ಈ ಜಲಾಶಯವನ್ನು ಕಟ್ಟಿಸುವ ಕೆಲಸವನ್ನು 1954ರಲ್ಲಿ ಪ್ರಾರಂಭಿಸಲಾಯಿತು ಮತ್ತು ಈವರೆಗೆ ಸುಮಾರು ಶೇಕಡ 30ರಷ್ಟು ಕೆಲಸ ಮುಗಿದಿದೆ ಎಂದು ಉತ್ತರದಲ್ಲಿ ಹೇಳಲಾಗಿದೆ. ಇಷ್ಟು ನಿಧಾನವಾಗಲು ಕಾರಣವೇನು ?

ಶ್ರೀ ಎಚ್. ಕೆ. ವೀರಣ್ಣಗೌಡ —ಉತ್ತರ ಕೊಟ್ಟಿದೆ, ಸ್ವಾಮಿ.

ಶ್ರೀ ಎ. ಆರ್. ಬದರಿನಾರಾಯಣ.—ಇಂಥ ಕೆಲಸಗಳು ಬಹಳ ನಿಧಾನವಾಗುತ್ತಿವೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಅಧ್ಯಕ್ಷರು.—ಮಾನ್ಯ ಸದಸ್ಯರು ಸಾಮಾನ್ಯವಾದ ಪ್ರಶ್ನೆಯನ್ನು ಕೇಳುತ್ತಿರುವಿರಿ, ಹಾಗೆ ಕೇಳದೆ ಇಂಥ ಒಂದು ಕೆಲಸದಲ್ಲಿ ನಿಧಾನವಾಗಿದೆಯೇ ಎಂದು ಕೇಳಬಹುದು.

ಶ್ರೀ ಎ. ಆರ್. ಬದರಿನಾರಾಯಣ.—ಇದೇ ಕ್ರಮದಲ್ಲಿ ಇನ್ನು ಮುಂದೆಯೂ ಈ ಜಲಾಶಯದ ಕೆಲಸ ನಡೆದರೆ ಬಹಳ ನಿಧಾನವಾಗಿ ಆಗುವದಿಲ್ಲವೆ ?

Mr. SPEAKER.—That is a matter of opinion.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಈ ಜಲಾಶಯದ ಕೆಲಸ ಪ್ರಾರಂಭವಾದಂದಿನಿಂದ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದ ಬಗ್ಗೆ ಒಟ್ಟು 34,319 ರೂಪಾಯಿ ಖರ್ಚು ಆಗಿದೆ. ಇದನ್ನು ವಜಾಮಾಡಿದರೆ ಉಳಿದ ಹಣ 2,76,245 ಖರ್ಚು ಆಗಿದೆ. ಇಷ್ಟು ವರ್ಷಗಳಲ್ಲಿ ಸಿಬ್ಬಂದಿಗಾಗಿಯೇ 34,319 ರೂಪಾಯಿ ಖರ್ಚು ಮಾಡಿದ್ದರೂ ಕೆಲಸವನ್ನು ಮುಗಿಸಲು ಆಗಲಿಲ್ಲವೇ ?

Mr. SPEAKER.—That question is irrelevant.

Constitution of a Committee to recommend grant of land to political sufferers.

Q.—221. Sri K. KENCHAPPA (Hiriyur).—

Will the Government be pleased to state :—

(*a*) the names of the committee members with their addresses appointed for each district in the State for recommending the names and addresses of the political sufferers, for grant of lands, etc. ;

(*b*) the number of them who were Congressmen and non-Congressmen at the time they were appointed ;

(*c*) whether they are aware that the Committee recommended the names of many persons who were not political sufferers ;

(*d*) whether they have directed to grant lands to political sufferers who are owning lands ?

A.—Sri M. P. PATIL (Minister for Revenue).—

(*a*) No such committee has been constituted.

The Government has decided to revise the list of political sufferers.

(*b*) Does not arise in view of reply to clause (*a*).

(*c*) Do do

(*d*) Do do

ಶ್ರೀ ಕೆ. ಕೆಂಚಪ್ಪ.—" The Government has decided to revise the list of political sufferers " ಎಂದು ಇದೆ. ಈ ರೀತಿಯಾಗಿ ಈ ಮೊದಲೇ ತಯಾರುಮಾಡಲಾಗಿದ್ದ ಪಟ್ಟಿಯನ್ನು ದುರಸ್ತು ಮಾಡಬೇಕೆಂದು ಇದ್ದರೆ, ಈ ಮೊದಲಿನ ಆ ಪಟ್ಟಿಯನ್ನು ಯಾವ ಆಧಾರದ ಮೇಲೆ ಮಾಡಿರುತ್ತೀರಿ ?

ಶ್ರೀ ಟಿ. ಮರಿಯಪ್ಪ.—ಲ್ಯಾಂಡ್ ರೆವೆನ್ಯೂ ರೂಲ್ಸ್ ಗಳಿಗೆ ಅನುಗುಣವಾಗಿ ಯಾರು ಯಾರು ರಾಜಕೀಯ ಸಂತ್ರಸ್ತರು ಎಂದು ಸರಕಾರದ ಗಮನಕ್ಕೆ ಬಂದಿದೆಯೋ ಅಂಥವರ ಹೆಸರುಗಳು ಇರತಕ್ಕಂಥ ಪಟ್ಟಿಯನ್ನು ತಯಾರು ಮಾಡಿದೆ.

ಶ್ರೀ ಕೆ. ಕೆಂಚಪ್ಪ.—ಈ ಮೂಲ ಪಟ್ಟಿಯನ್ನು ತಯಾರು ಮಾಡುವಾಗ ಅನುಸರಿಸಿದ ಮಾರ್ಗಗಳು ಯಾವಯಾವುಗಳೆಂಬುದನ್ನು ಹೇಳುವಿರಾ ?

ಶ್ರೀ ಟಿ. ಮರಿಯಪ್ಪ.—ಮಾಹಿತಿಯನ್ನು ದೊರಕಿಸಿಕೊಳ್ಳಲು ಸರಕಾರಕ್ಕೆ ಯಾವಯಾವ ಮಾರ್ಗಗಳಿವೆಯೋ ಅಂಥ ಎಲ್ಲ ಮಾರ್ಗಗಳನ್ನೂ ಉಪಯೋಗಿಸಿಕೊಂಡು ಮಾಹಿತಿಯನ್ನು ಸಂಪಾದಿಸಲಾಗಿದೆ.

AN HON'BLE MEMBER.—When was the list prepared ?

Sri T. MARIAPPA.—This list has been published in the Gazette.

AN HON'BLE MEMBER.—I want to know when the list was prepared.

Sri T. MARIAPPA.—It has been published in the Gazette dated 26th October 1956.

AN HON'BLE MEMBER.—What is the total number of political sufferers in that list ?

Sri T. MARIAPPA.—Is it open to an Hon'ble Member to put a question on a matter the information about which is printed in the Gazette ?

Mr. SPEAKER.—It has been published in the Gazette and it is an open secret now.

Sri D. DEVARAJ URS.—It was just now stated that the list of political sufferers has been prepared in accordance with the rule laid down in the Land Revenue Rules, but the answer given here is that Government has decided to revise the list of political sufferers. What exactly is meant by 'revision of list of political sufferers' ?

Sri T. MARIAPPA.—No list can hold good for all time. It will require revision from time to time. Therefore, it is revised as and when necessary.

Sri J. H. SHAMSUDDIN.—What are the criteria for the revision of the list ?

Sri T. MARIAPPA.—We have got the definition of 'political sufferers' and as and when information comes to the notice of Government, the list is revised. We may add or delete.

Sri G. VENKATA GOWDA.—Does the list include the political sufferers from the areas that have been integrated ?

Sri T. MARIAPPA.—No. This list pertains to the old Mysore State.

ಶ್ರೀ ಎಚ್. ಜಿ. ನರಸಿಂಹೇಗೌಡ.—ರಾಜಕೀಯ ಸಂತ್ರಸ್ತರು ಎಂದರೆ ಅದರಲ್ಲಿ ಯಾರು ಯಾರು ಸೇರ್ಪಡೆಯಾಗುತ್ತಾರೆ ? ಈ ರಾಜಕೀಯ ಸಂತ್ರಸ್ತರಲ್ಲಿ ಕಾಂಗ್ರೆಸ್ಸಿನವರು ಅಷ್ಟೇ ಇದ್ದಾರೆಯೋ ಅಥವಾ ನಾನ್-ಕಾಂಗ್ರೆಸ್ಸಿಗರೂ ಇರುವರೋ ?

ಶ್ರೀ ಟಿ. ಮರಿಯಪ್ಪ.—ರಾಜಕೀಯ ಚಳವಳಿಯಲ್ಲಿ ಯಾರು ಯಾರು ಭಾಗವಹಿಸಿದ್ದಾರೆಯೋ ಅಂಥವರು ಎಲ್ಲರೂ ಈ ಪಟ್ಟಿಯಲ್ಲಿ ಸೇರ್ಪಡೆಯಾಗುತ್ತಾರೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ನಾನ್-ಕಾಂಗ್ರೆಸ್ಸಿಗರಾದವರಿಗೆ ಜಮೀನು ಕೊಟ್ಟಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಮರಿಯಪ್ಪ.—ನರಕಾರದವರ ಗಮನಕ್ಕೆ ಬಂದಿಲ್ಲ.

ಶ್ರೀ ಎನ್. ಜಿ. ನರಸಿಂಹೇಗೌಡ.—ಇನ್ನು ಮುಂದಾದರೂ ಈ ಬಗ್ಗೆ ತಕ್ಕ ಕ್ರಮ ತೆಗೆದು ಕೊಳ್ಳುತ್ತೀರಾ ?

ಶ್ರೀ ಟಿ. ಮರಿಯಪ್ಪ.—ಸೂಕ್ತವಾದ ಕ್ರಮ ತೆಗೆದು ಕೊಳ್ಳಲಾಗುವದು. ಲ್ಯಾಂಡ್ ರೆವೆನ್ಯೂ ರೂಲ್ಸಿನಲ್ಲಿ ಕೊಟ್ಟಿರುವ ವಿವರಣೆಗೆ ಅನುಸಾರವಾಗಿ ಎಲ್ಲರಿಗೂ ಜಮೀನು ಸಿಕ್ಕುತ್ತದೆ.

ಶ್ರೀ ಕೆ. ಕೆಂಚಪ್ಪ.—ರಾಜಕೀಯ ಪಕ್ಷವಾದ ಕಾಂಗ್ರೆಸ್ ಧ್ಯೇಯವನ್ನಿಟ್ಟುಕೊಂಡಂಥ ಸಂತ್ರಸ್ತರಿಗೆ ಮಾತ್ರ ಜಮೀನು ಕೊಡಲಾಗಿದೆ ಎಂಬುದು ಸರಕಾರದವರ ಗಮನಕ್ಕೆ ಬಂದಿದೆಯೇ ? ಇಲ್ಲವಾದರೆ ಯಾವ ಕಡೆಯಿಂದ ಬಂದಿರತಕ್ಕಂಥ ವರ್ತಮಾನದಿಂದ ಈ ಪಟ್ಟಿಯನ್ನು ತಯಾರು ಮಾಡಲಾಗಿದೆ ?

ಶ್ರೀ ಟಿ. ಮರಿಯಪ್ಪ.—ರಾಜಕೀಯ ಸಂತ್ರಸ್ತರ ಹೆಸರುಗಳನ್ನು ತಿಳಿದುಕೊಳ್ಳುವ ಅನೇಕ ಮಾರ್ಗಗಳು ಸರಕಾರಕ್ಕೆ ಇವೆ. ಸ್ವಾತಂತ್ರ ಹೋರಾಟದಲ್ಲಿ ಭಾಗವಹಿಸಿ ಸಂತ್ರಸ್ತರಾಗಿರತಕ್ಕಂಥ ಜನರ ಹೆಸರುಗಳು ಸರಕಾರಕ್ಕೆ ಅಧಿಕಾರಿಗಳು ಕಳಿಸಿರತಕ್ಕಂಥ ರಿಪೋರ್ಟುಗಳ ಮೂಲಕ ದೊರೆತಿವೆ. ಹಾಗೂ ನಮ್ಮ ಪ್ರತಿನಿಧಿಗಳೂ ಸಹ ಸರಕಾರಕ್ಕೆ ಬರೆದು ತಿಳಿಸಿದ್ದಾರೆ. ಹೀಗೆ ನಾನಾ ಮಾರ್ಗಗಳಿಂದ ಸರಕಾರದ ಗಮನಕ್ಕೆ ಬಂದಿದೆ. ಸದಸ್ಯರುಗಳೂ ಸಹ ಅರ್ಜಿ ಹಾಕಿದ್ದಾರೆ.

Sri ANNA RAO GANAMUKHI.—Does the Government propose to prepare a list of political sufferers from the Hyderabad Karnatak ?

Mr. SPEAKER.—That is a suggestion for action.

Sri J. H. SHAMSUDDIN.—Does the list contain the name of any Hon'ble Member of this House ?

(*No answer*)

ಶ್ರೀ ಯು. ಎಂ. ಮಾದಪ್ಪ.—ರಾಜಕೀಯ ಸಂತ್ರಸ್ತರು ಯಾರಿಗೆ ಅರ್ಜಿ ಹಾಕಿಕೊಳ್ಳಬೇಕೆಂಬುದನ್ನು ಸರಕಾರದವರೇನಾದರೂ ನಿರ್ಧಾರವಾಗಿ ಹೇಳುವುದಕ್ಕೆ ಸಾಧ್ಯವೇ ?

ಶ್ರೀ ಟಿ. ಮರಿಯಪ್ಪ.—ಲ್ಯಾಂಡ್ ರೆವೆನ್ಯೂ ಕೋಡ್ ಮತ್ತು ಲ್ಯಾಂಡ್ ರೆವೆನ್ಯೂ ರೂಲ್ಸ್ ಪ್ರಕಾರ ಯಾರಿಗೆ ಜಮೀನು ಕೊಡುವುದಕ್ಕೆ ಅಧಿಕಾರವಿದೆಯೋ ಅವರಿಗೆ ಅಥವಾ ಸರ್ಕಾರಕ್ಕೆ ಹಾಕಿಕೊಳ್ಳಬೇಕು.

Sri B. R. SUNTHANKAR.—May I know what is the general policy in this respect ?

Mr. SPEAKER.—It has been stated. It is in accordance with the rules under the Land Revenue Code.

Sri B. R. SUNTHANKAR.—May I know whether the Government have received any application from Belgaum?

Mr. SPEAKER.—That does not arise.

Sri V. S. PATIL.—May I know the number of political sufferers who are already in the list ?

Mr. SPEAKER.—The list is there. It is published in the Gazette.

Sri V. S. PATIL.—What is the number of political sufferers and what is the acreage of lands available to be given to those persons ?

Mr. SPEAKER.—All those informations have been published in the Gazette.

Sri N. RACHIAH.—May I know whether lands have been given to those who already own lands and if so, whether the Government will consider this aspect and cancel the land already granted ?

Sri T. MARIAPPA.—That is only a suggestion.

Mr. SPEAKER.—If there are any such instances it would be better if the Hon'ble Member brings such instances to the notice of the Hon'ble Minister.

Sri G. DUGGAPPA.—Whether it is a fact that in many cases persons included in the list are found to possess sufficient lands ?

Mr. SPEAKER.—Hon'ble Member may point out such cases.

Sri M. RAMAPPA.—Is it a fact that this list has been prepared only on the recommendations of the District Congress Committee ?

Sri T. MARIAPPA.—Not necessarily.

Sri M. RAMAPPA.—My question is that it has been prepared only on the recommendations of the District Congress Committee.

Mr. SPEAKER.—That is not a question.

Sri T. MARIAPPA.—The Government have prepared the list on the basis of information available to them.

Sri M. RAMAPPA.—While revising the list, will the Government please consult the leaders of all political parties ?

Mr. SPEAKER.—That is a suggestion for action.

ಶ್ರೀ ಕೆ. ಕೆಂಚಪ್ಪ.—221ನೆಯ ಪ್ರಶ್ನೆಯ (*d*) ಭಾಗದಲ್ಲಿ " whether they have directed to grant lands to political sufferers who are owning lands ? " ಎಂದು ಕೇಳಿರುವುದಕ್ಕೆ " Does not arise inview of reply to clause (*a*) " ಎಂದು ಉತ್ತರ ಕೊಟ್ಟಿದೆ. ಆದರೆ ಆ ಉತ್ತರ ಈ ಪ್ರಶ್ನೆಗೆ ಸರಿಹೋಗುತ್ತದೆಯೆ ?

ಅಧ್ಯಕ್ಷರು.—ನೀವು ಅದನ್ನು ಸರಿಯಾಗಿ ಓದಿಲ್ಲ: ನಾನು ಓದಿದ್ದೇನೆ. " ಯಾವುದೊಂದು ಸಮಿತಿಯನ್ನು ನೇಮಿಸಿರುವುದಿಲ್ಲ" ಎಂದು (*a*) ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ಆದ್ದರಿಂದ ಆ ಸಮಿತಿಯವರಿಗೆ ಡೈರೆಕ್ಷ್ಷ್ ಕೊಡುವ ಪ್ರಶ್ನೆ ಉದ್ಭವಿಸುವುದಿಲ್ಲ.

Sri K. KENCHAPPA.—I submit that by no stretch of imagination we can draw that inference.

Mr. SPEAKER.—Instead of drawing inferences, I would like the Hon'ble Member to put a question.

ಶ್ರೀ ಕೆ. ಕೆಂಚಪ್ಪ.—ಈಗ ಸರ್ಕಾರದವರು ಜಮೀನುಗಳನ್ನು ರಾಜಕೀಯದಲ್ಲಿ ನೊಂದವರಿಗೆ ಕೊಡುವಾಗ ಅವರಿಗೆ ಜಮೀನಿದ್ದರೂ ಕೂಡ ಕೊಡಬೇಕೆಂದೇನಾದರೂ ನಿರ್ದೇಶವಿದೆಯೆ ?

ಶ್ರೀ ಟಿ. ಮರಿಯಪ್ಪ.—ಇಲ್ಲ. ಲ್ಯಾಂಡ್ ರೆವೆನ್ಯೂ ರೂಲ್ಸ್‌ನಲ್ಲಿ ಜಮೀನಿಲ್ಲದಿರುವವರಿಗೆ ಮತ್ತು ಸಾಕಷ್ಟು ಪಡೆದಿಲ್ಲದಿರುವವರಿಗೆ ಕೊಡಬೇಕೆಂದೇನಿದೆಯೋ ಆ ಪ್ರಕಾರ ಕೊಡುತ್ತೇವೆ. ಬೇರೆ ನಿರ್ದೇಶವೇನೂ ಇಲ್ಲ.

ಶ್ರೀ ಬಿ. ಎಸ್. ಶಂಕರಪ್ಪ.—ಹೊಸದುರ್ಗ ತಾಲ್ಲೂಕು ಬಾಗೂರು ವೆಂಕಟರಾಮಯ್ಯ ಎಂಬವರಿಗೆ ಹೆಚ್ಚು ಜಮೀನಿದ್ದರೂ ಸಹ ಅವರಿಗೆ ಕೊಟ್ಟಿಲ್ಲವೆ ?

Mr. SPEAKER.—I am not concerned whether the land is given to a certain person or not. If the Hon'ble Member wants to know whether land has been given to a particular person, it is better if care is taken to formulate questions in such a way as to permit of putting such supplementary quastions. If the Hon'ble Member is bent upon asking the question whether such and such a person was granted lands, he must take care at the time of formulating questions. If it is the intention of the Hon'ble member that the Government have erred in giving land to a certain person, the Member may ask the Minister in his chambers.

ಶ್ರೀ ಎಂ. ಲಿಂಗೇಗೌಡ.—ರಾಜಕೀಯದಲ್ಲಿ ನೊಂದವರ ಪಟ್ಟಿಯಲ್ಲಿ ' ಮೈಸೂರು ಚಲೋ ' ಚಳವಳಿಯಲ್ಲಿ ಸೇರಿದ್ದವರನ್ನೂ ಅಡಕಮಾಡಿದೆಯೆ ?

ಶ್ರೀ ಟಿ. ಮರಿಯಪ್ಪ.—ರಾಜಕೀಯದಲ್ಲಿ ನೊಂದವರು ಯಾರೆಂಬುದನ್ನು ಅದರ ಡೆಫೆನಿಷ್ಷ್‌ನಲ್ಲೇ ನಮೂದಿಸಲಾಗಿದೆ. ಭಾರತ ಸ್ವಾತಂತ್ರ್ಯ ಸಂಗ್ರಾಮ ಮತ್ತು ಜವಾಬ್ದಾರಿ ಸರ್ಕಾರಗಳಿಗೆ ಹೊಡೆದಾಡುವಾಗ ಭಾಗವಹಿಸಿದವರು ಅದರಲ್ಲಿ ಸೇರಿದ್ದಾರೆ.

ಶ್ರೀ ಎಂ. ಲಿಂಗೇಗೌಡ.—ರಾಜಕೀಯದಲ್ಲಿ ನೊಂದವರ ಹೈಕಿ ವ್ಯವಸಾಯ ಮಾಡುವುದು ಗೊತ್ತಿಲ್ಲದಿರುವವರಿಗೂ ಜಮೀನು ಕೊಡಬೇಕೆಂದು ತೀರ್ಮಾನವಾಗಿದೆಯೆ ?

ಶ್ರೀ ಟಿ. ಮರಿಯಪ್ಪ.—ಜಾರಿಯಲ್ಲಿರತಕ್ಕಂಥ ನಿಯಮಗಳ ಪ್ರಕಾರವಾಗಿ ಯಾರು ಯಾರು ಸಂಬಂಧಪಟ್ಟ ಡೆಫೆನಿಷ್ಷ್ ಕೆಳಗೆ ಬರುತ್ತಾರೋ ಅವರಿಗೆಲ್ಲಾ ಕೊಡಬೇಕಾಗಿದೆ.

ಶ್ರೀ ಎಂ. ಲಿಂಗೇಗೌಡ.—ವ್ಯವಸಾಯ ಗೊತ್ತಿಲ್ಲದಿರುವವರಿಗೆ ಜಮೀನು ಕೊಟ್ಟ ಮೇಲೆ ಆ ಜಮೀನನ್ನು ಮಾರಾಟ ಮಾಡಿರುವುದು ಗಮನಕ್ಕೆ ಬಂದಿದೆಯೆ ?

ಅಧ್ಯಕ್ಷರು.—ಅಂಥ ಉದಾಹರಣೆಯಿದ್ದರೆ ಹೇಳಬೇಕೇ ವಿನಾ ಸಾಮಾನ್ಯವಾಗಿ ಹೇಳಬಾರದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮೈಸೂರು ಸಂಸ್ಥಾನದಲ್ಲಿ ರಾಜಕೀಯ ನಂತ್ರಸ್ತರ ಪಟ್ಟಿಯನ್ನು ತಯಾರು ಮಾಡಿದವರು ಯಾರು ?

ಅಧ್ಯಕ್ಷರು.—ಸರ್ಕಾರದವರು.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ರಾಜಕೀಯದಲ್ಲಿ ನೊಂದವರಿಗೆ ಮಾತ್ರ ಜಮೀನು ಕೊಡುತ್ತೀರೋ ಅಥವಾ ಅವರ ಮಕ್ಕಳು ಮರಿಗಳಿಗೂ ಸಹ ಕೊಡುತ್ತೀರೋ ?

ಅಧ್ಯಕ್ಷರು.—ರಾಜಕೀಯ ನಂತ್ರಸ್ತರು ಎಂಬುದಕ್ಕೇನು ಡೆಫೆನಿಷ್ಷ್ ಲ್ಯಾಂಡ್ ರೆವೆನ್ಯೂ ಕೋಡಿನಲ್ಲಿದೆಯೋ ಆ ಪ್ರಕಾರ ಜಮೀನು ಕೊಡುವುದಾಗಿ ಹೇಳುತ್ತಾರೆ. ಆದ್ದರಿಂದ ತಮ್ಮ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ರಾಜಕೀಯ ನಂತ್ರಸ್ತರೆಂದು ಸರ್ಟಿಫೈ ಮಾಡುವವರು ಯಾರು ?

ಶ್ರೀ ಟಿ. ಮರಿಯಪ್ಪ.—ಅದನ್ನು ವಿಚಾರ ಮಾಡಿ ತಿಳಿದುಕೊಳ್ಳುತ್ತಾರೆ. ರಾಜಕೀಯ ಚಳವಳಿಯಲ್ಲಿ ಭಾಗವಹಿಸಿದ್ದರೆಂದು ಗೊತ್ತಾದರೆ ಅವರನ್ನು ಪಟ್ಟಿಯಲ್ಲಿ ಸೇರಿಸುತ್ತಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹಾಗೆ ಮಾಡುವವರು ಯಾರು ?

ಶ್ರೀ ಟಿ. ಮರಿಯಪ್ಪ.—ಯಾರೂ ಮಾಡಬೇಕಾಗಿಲ್ಲ. ಭಾಗವಹಿಸಿರುವವರ ಹೆಸರು ತಾನೇ ಗೊತ್ತಾಗುತ್ತದೆ.

Sri K. PUTTASWAMY.—May I know whether the revenue rules contemplate preparation of such a list ?

Sri T. MARIAPPA.—So far as my memory goes, it does not contemplate preparation of any list.

Sri K. PUTTASWAMY.—May I know whether the revenue rules contemplate the preparation of such a list?

Sri T. MARIAPPA.—I want notice. So far as my memory goes, it does not contemplate the preparation of any list.

Sri K. PUTTASWAMY.—May I know what was the reason for preparing such a list?

Sri T. MARIAPPA.—Sir, people had applied and certain enquiries were made and on the basis of that enquiry and on the basis of applications filed, lists have been prepared. Even the Government Order says that the whole thing had to be checked up.

Sri K. PUTTASWAMY.—Are not the rules definite that the applications for grant of land have to be sent to the Revenue Officers concerned?

Sri T. MARIAPPA.—In fact, lands will be granted by appropriate officers who have authority to grant lands.

Sri K. PUTTASWAMY.—The Government were pleased to say that they were thinking of revising the list. May I know what are the reasons that have made the Government think of revising the list?

ಅಧ್ಯಕ್ಷರು.—ಆಗಲೇ ಅದಕ್ಕೆ ಉತ್ತರ ಕೊಟ್ಟಿದ್ದಾರೆ.

Sri K. PUTTASWAMY.—I am sorry. The answer has not been given. They have said that the Government might add on to the list.

ಅಧ್ಯಕ್ಷರು.—ಸರ್ಕಾರದವರು ಒಮ್ಮೆ ಮಾಡಿರುವ ಲಿಸ್ಟನ್ನು ಏಕೆ ಬದಲಾವಣೆ ಮಾಡುತ್ತಾರೆಂದು ತಾವು ಕೇಳುತ್ತಿದ್ದೀರಿ. ಅದಕ್ಕಾಗಲೇ ಉತ್ತರ ಕೊಟ್ಟಿದ್ದಾರೆ.

ಶ್ರೀ ಸೀತಾರಾಮಯ್ಯ.—ಇತ್ತೀಚೆಗೆ ಸರ್ಕಾರದವರು ರಾಜಕೀಯ ಸಂತ್ರಸ್ತರಿಗೆ ಜಪ್ತಿಯಾನು ಕೊಡಬೇಕೆಂದು ಮಾಡಿದ್ದನ್ನು ನಿಲ್ಲಿಸಿದ್ದಾರೆಂದು ಕೇಳಿದ್ದೇನೆ. ಇದಕ್ಕೆ ಕಾರಣವೇನು?

Sri T. MARIAPPA.—The whole question is being reviewed.

Sri H. M. CHANNABASAPPA.—Are the Government aware that the grant contemplated in the order in question was merely to such of those people who made applications to the Government?

Sri T. MARIAPPA.—I have already answered that question.

Sri H. M. CHANNABASAPPA.—Are the Government aware that the list of persons who are deemed to be political sufferers to whom the grants are made under the order is not final?

ಅಧ್ಯಕ್ಷರು.—ಅವರೇ ರಿವೈಸ್ ಮಾಡುತ್ತೇವೆಂದು ಹೇಳಿದ್ದಾರೆ.

Sri H. M. CHANNABASAPPA.—Does not the order contain a clause that any person who is a political sufferer in rule 43 (*b*) can apply to the Deputy Commissioner and obtain lands if he is a political sufferer?

Sri T. MARIAPPA.—It is self-evident.

Sri H. M. CHANNABASAPPA.—Does not the Order contain such a clause?

Sri T. MARIAPPA.—The order is there; it can be read, and it is so.

Action taken to start a High School at Kanasavadi, Madhure Hobli, Doddballapur Taluk.

Q—29. Sri S. KARIAPPA (Virupakshipura).—

Will the Government be pleased to state:—

(*a*) whether it is a fact that the people of Kanasavadi, Madhure Hobli, Doddballapur Taluk, have made a formal request for a High School;

(*b*) whether they have deposited Rs. 33,000 for building and equipment besides giving 20 acres of land for the School;

(*c*) the action taken in the matter?

A.—Sri V. VENKATAPPA (Minister for Education).—

(*a*) Yes.

(*b*) They have deposited this sum and have executed a mutchalika that they would give 20 acres of land for agricultural and sports activities.

(*c*) The question is under active consideration of Government.

ಶ್ರೀ ಎಸ್. ಕರಿಯಪ್ಪ.—ಅವರ ಭಾಗದ ಹಣವನ್ನು ಕೊಟ್ಟು ಎಷ್ಟು ದಿವಸವಾಯಿತು?

ಶ್ರೀ ವಿ. ವೆಂಕಟಪ್ಪನವರು.—ಗೊತ್ತಿಲ್ಲ.

ಶ್ರೀ ಎಸ್. ಕರಿಯಪ್ಪ.—ನುಮಾರು ಹತ್ತು ತಿಂಗಳ ಮೇಲೆ ಆಗಿದೆಯೆಂದರೆ ಒಪ್ಪಿಕೊಳ್ಳುತ್ತೀರಾ?

ಶ್ರೀ ವಿ. ವೆಂಕಟಪ್ಪ.—ಇರಬಹುದು.

Sri J. H. SHAMSUDDIN.—When will the Government complete the consideration of the question?